ಶ್ರೀ ಎಸ್. ಬಂಗಾರಪ್ಪ :—ತಮ್ಮ ಸರಕಾರ ಮೈನಾರಿಟಿ ಸರಕಾರ ಎಂಬ ಕೂಗು ಮೊದಲಿನಿಂದಲೂ ಇರುವುದರಿಂದ ಈಗಲಾದರೂ ಯಾರ್ಯಾರು ಯಾವ ಯಾವ ಕೋಮು ಗಳಿಗೆ ಸೇರಿದ್ದಾರೆಂಬುದನ್ನು ಪತ್ತೆಹಚ್ಚಿ ಮಾಹಿತಿ ಕೊಡಬಹುದಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :—ಮಾನ್ಯ ಸದಸ್ಯರು ಮೈನಾರಿಟಿ ಸರಕಾರ ಎಂದು ಆ ಆಧಾರದ ಮೇಲೆ ಪ್ರಾರಂಭಿಸಿದರು. ಅದು ಅರ್ಥವಾಗುವುದಿಲ್ಲ. ಮೈನಾರಿಟಿ ಸರಕಾರ ಹೇಗಾಗುತ್ತದೆ ? ಅಧ್ಯಕ್ಷರೇ, ಮೈನಾರಿಟಿ ಸರಕಾರವಾಗುವುದಕ್ಕೆ ಸಾಧ್ಯವಿಲ್ಲ. ಮೈನಾರಿಟಿ ಗವರ್ನ್‌ಮೆಂಟ್ ಇಂಗ್ಲೆಂಡ್‌ನಲ್ಲಿದೆ. ಆ ತರಹ ನಾವು ಇಲ್ಲ. ಇದು ಮೈನಾರಿಟಿ ಸರ್ಕಾರ ಅಲ್ಲ ಮೈನಾರಿಟಿ ಸರ್ಕಾರ ಇದ್ದರೆ ಅವರ ಜಾತಿಯನ್ನು ಕೊಡುತ್ತೇನೆ ಎಂದು ಹೇಳಿದ ಹಾಗೆ ಆಯಿತು. ಮೈನಾರಿಟಿ ಸರ್ಕಾರ ಎಂದು ಹೇಳುವ ಮಾತು ಸರಿಯಾದುದಲ್ಲ. ಆದುದರಿಂದ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಅರ್ಹತೆ ಇರತಕ್ಕವರಿಗೆ ಖಂಡಿತ ಮಾನ್ಯತೆ ಕೊಡುತ್ತೇವೆ ಎನ್ನುವ ರೂಪದಲ್ಲಿ ಮಾನ್ಯ ಮಂತ್ರಿಗಳು ಉತ್ತರಕೊಟ್ಟರು. ಹೋಂಸೈನ್ಸ್‌ನಲ್ಲಿ ಕೆಲಸಮಾಡತಕ್ಕ ಸೆಲ್ವದಾಸ್ ಅವರು ನಮ್ಮ ಆರೋಗ್ಯ ಮಂತ್ರಿಗಳ ಕೈಕೆಳಗೆ ಕೆಲಸಮಾಡತಕ್ಕ ಡಾಕ್ಟರ್ ರುದ್ರಪ್ಪನವರು, ಪಶುಪಾಲನೆ ಇಲಾಖೆಯಲ್ಲಿ ಕೆಲಸಮಾಡತಕ್ಕ ಡಾಕ್ಟರ್ ನರಸಿಂಹಸ್ವಾಮಿಯವರು ಇವರುಗಳು ವಿಶೇಷ ಅರ್ಹತೆ ಪಡೆದಿರುವುದರಿಂದ ಅವರನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ ಆಗಿ ಮಾಡುವದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಅಧಿಕಾರಿಗಳ ಅರ್ಹತೆಯನ್ನು ಅಳೆಯತಕ್ಕವರು ಯಾರು ? ಅದನ್ನು ಸಂಬಂಧಪಟ್ಟ ಶಾಸಕರಿಗೇ ಕೊಟ್ಟುಬಿಡೋಣ ಎಂದು ಸಭೆ ತೀರ್ಮಾನ ಮಾಡಿದರೆ ಆಗ ಬಹುದು. ಆಗ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ತಾವು ಸಂಬಂಧಪಟ್ಟ ಜಾತಿಯವರು ದಕ್ಷರೇ ಅಲ್ಲವೇ ಎಂದು ಸರ್ಟಿಫೈ ಮಾಡಿ ಸರ್ಕಾರಕ್ಕೆ ಕೊಟ್ಟರೆ ಸರಿಹೋಗುತ್ತದೆ. ಇದು ರಕ್ಷಣೆ ಕೊಡತಕ್ಕ ಪ್ರಶ್ನೆಯಲ್ಲ. ಯಾವುದೇ ಕೆಲಸ ಮಾಡಬೇಕಾದರೂ ದಕ್ಷತೆ, ಪ್ರಾಮಾಣಿಕತೆ, ಅಥವಾ ಮತ್ತೊಂದು ವಿಚಾರ ಯಾವುದನ್ನೇ ಆದರೂ ಅಳತೆಮಾಡತಕ್ಕ ಅಳತೆಗೋಲು ಸರ್ಕಾರದಲ್ಲಿ ಇದೆ. ಅದು ಬಿಟ್ಟು ಮತ್ತೆ ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಜಾತಿ ಆಧಾರದ ಮೇಲೆ ಎಲ್ಲ ರೀತಿಯಾದಂಥ ಕ್ವಾಲಿಫಿಕೇಷನ್ಸ್ ಇವೆ. ನಮಗೆ ಬರುವುದಕ್ಕೆ ಅರ್ಹತೆ ಇದೆ ಎಂದು ಹೇಳಿಕೊಂಡು ತಿರುಗಿಬಿಟ್ಟಿರೆ ಆಗುವುದಿಲ್ಲ. ಸರ್ಕಾರ ಅವನ್ನೆಲ್ಲಾ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರಿಗೆ ಎಷ್ಟರಮಟ್ಟಿಗೆ ಅರ್ಹತೆ ಇದೆ, ಯಾರಿಗೆ ಯಾವಾಗ ಬಡ್ತಿ ಕೊಡಬೇಕು ಎನ್ನುವುದೆಲ್ಲಾ ಸರ್ಕಾರಕ್ಕೆ ಗೊತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :— ಮಂತ್ರಿಗಳಿಂದ ಸರಿಯಾಗಿ ಉತ್ತರ ಬರಲಿಲ್ಲ. ಅಧ್ಯಕ್ಷರು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧಗಂಟೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :—ಕಳುಹಿಸಿಕೊಡಿ.

MINIMUM NEEDS PROGRAMME

418. Sri PRABHAKAR TELKAR (Kalagi) :—Will the Chief Minister be pleased to state:—

(*a*) Whether the Government has prepared any scheme to provide minimum needs, such as drinking water facilities, approach to All Weather Roads, Electricity and Housing to every village ;

(*b*) Whether the Government has allotted or proposed to allot any amount to implement this scheme in the Fifth Five Year Plan;

(*c*) Whether the Government is contemplating to implement the scheme before the Fifth Five Year Plan, if so, when ?

Sri D. DEVARJ URS. (Chief Minister) :—(*a*) Yes. This would be as part of the National Basic Minimum Needs Programme in the Fifth Five Year Plan.

(*b*) The Fifth Five Year Plan of the State is yet to be finalised by the Planning Commission. As per present indications Rs. 102.60 crores would be spent on the Minimum Needs Programme during the Fifth Five Year Plan in the State.

(*c*) No The scheme will be implemented with the commencement of the Fifth Five Year Plan only.

Sri PRABHAKAR TELKAR :—What is the criteria for selecting villages for minimum needs programme ?

Sri D. DEVARAJ URS :—There is no criteria ಆಗತ್ಯ ಇದ್ದ ಕಡೆ ಮಾಡುತ್ತೇವೆ, ಯಾವ ಯಾವ ಹಳ್ಳಿಯಲ್ಲಿ ಕುಡಿಯುವ ನೀರು ಇಲ್ಲವೋ ಅದನ್ನು ತೆಗೆದುಕೊಳ್ಳುತ್ತೆವೆ. ಯಾವ ಯಾವ ಹಳ್ಳಿಯಲ್ಲಿ ರಸ್ತೆ ಇಲ್ಲವೋ ಅದನ್ನು ತೆಗೆದು ಕೊಳ್ಳುತ್ತೇವೆ.

Sri PRABHAKAR TELKAR :—What we see is, in some villages we find electricity and water supply are provided to the village But the Harijan-wadi an Lambani Thanda do not have these advantages. I want to know whether you are going to select such units where there is no water supply or electricity or whether you are going to give preference to such villages whether there is electricity and water supply to the villages, but not to the Lambani Thanda ?

ಶ್ರೀ ಡಿ. ದೇವರಾಜ್ ಅರಸ್ :—ಹರಿಜನವಾಡಿ, ಲಂಬಾಣಿ ತಾಂಡಗಳಲ್ಲಿ ನೀರು ಇಲ್ಲದೇ ಹೋದರೆ, ಅದು ಯಾವ ಊರೇ ಆಗಲಿ, ಅಲ್ಲಿ ಕೊಡಬೇಕಾಗುತ್ತದೆ. ಇನ್ನು ಯಾವ ಕ್ರೈಟೀರಿಯ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕುಡಿಯುವ ನೀರು ಇಲ್ಲ ಎನ್ನುವುದು ಕ್ರೈಟೀರಿಯ. ಜನರ ಸಂಖ್ಯೆ ಹೆಚ್ಚಾಗಿದ್ದ ಕಡೆ ಮೊದಲು ಕೊಡಬೇಕಾ ಗುತ್ತದೆ. ಒಂದು ಕಡೆ ೨೦೦ ಮನೆಗಳು ಇರುತ್ತವೆ, ಇನ್ನೊಂದು ಕಡೆ ೨೫ ಮನೆಗಳು ಇರುತ್ತವೆ, ನೀರು ಇರುವುದಿಲ್ಲ. ಅವುಗಳಿಗೆಲ್ಲಾ ಏಕಕಾಲದಲ್ಲಿ ಕೊಡುವುದಕ್ಕಾಗುವುದಿಲ್ಲ. ಹರಿಜನವಾಡಿ, ಲಂಬಾಣಿತಾಂಡ ಹೆಚ್ಚು ಜನ ಇರುವ ಕಡೆ ಮೊದಲು ಕೊಡುವ ಪ್ರಯತ್ನ ಮಾಡುತ್ತೇವೆ. ವಿದ್ಯುಚ್ಛಕ್ತಿ ಕೊಡತಕ್ಕದ್ದು ಗವರ್ನ್‌ಮೆಂಟ್ ಆಫ್ ಇಂಡಿಯಾ

ಸ್ಕೀಂ ಇತ್ತು. ಅದರ ಪ್ರಕಾರ ಹರಿಜನವಾಡಿಗೆ ಸರ್ಕಾರವೇ ವಿದ್ಯುಚ್ಛಕ್ತಿಯನ್ನು ಕೋಡೋಣ, ಇದಕ್ಕೆ ಸರ್ಕಾರವೇ ದುಡ್ಡನ್ನು ಒದಗಿಸಿಕೊಡುತ್ತದೆ ಎಂದು ಬಂದಿತ್ತು. ಹೋದವರ್ಷ ನಾ ನಾ ಕಾರಣಗಳಿಂದ ಸಾಕಷ್ಟು ಹಣ ಉಪಯೋಗಮಾಡಿ, ಕೆಲಸ ಹೆಚ್ಚಿಗೆ ಪೂರೈಸುವುದಕ್ಕೆ ಆಗಲಿಲ್ಲ. ಕೇಂದ್ರಸರ್ಕಾರದಿಂದ ಬಂದ ಹಣವನ್ನು ಉಪ ಯೋಗಿಸಿ ಹರಿಜನ ವಾಡಿಯಲ್ಲಿ ಎಲ್ಲಾ ಕಡೆ ವಿದ್ಯುಚ್ಛಕ್ತಿ ಕೊಡಬೇಕು ಎಂದು ಅದರಂತೆ ಕೆಲಸಮಾಡುತ್ತಿದ್ದೇವೆ. ಹೋದವರ್ಷ ಕ್ಷಾಮ ಇರುವ ಏರಿಯಾನಲ್ಲಿ ತಕ್ಷಣ ಎಲ್ಲಾ ಕಡೆ ವಿದ್ಯುಚ್ಛಕ್ತಿ ಕೊಡಬೇಕು, ಲಿಫ್ಟ್ ಇರಿಗೇಷನ್, ವಾಟರ್, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದ್ದರಿಂದ ಸ್ವಲ್ಪ ಅತ್ತಕಡೆ ಗಮನ ಕಡಿಮೆಯಾದುದು ಕಾರಣವಿದೆ. ಹಾಗೇ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇದೆ ಎಂದಾಕ್ಷಣ ಹರಿಜನವಾಡಿಯಲ್ಲಿ ಹೆಚ್ಚು ಜನ ಇದ್ದರೆ ಅದಕ್ಕೆ ಕೊಡಬಾರದು ಎಂದಲ್ಲ, ಕ್ರೈಟೀರಿಯ ಅಷ್ಟೇ ಎಂದು ಇಟ್ಟುಕೊಳ್ಳ ಬಹುದು.

Sri PRABHAKAR TELKAR :—What we find is, in the case of Harijan wadi and Lambani thandas where electricity and water supply is not provided, whether Government is going to take up another scheme or depute the Social Welfare Dept. to look into these needs, because panchayats are not able to guarantee supply by paying the Bills? In such case, whether it is possible to ask the Social Welfare Department to pay such charges and provide these amenities to them?

Sri D. DEVEARAJ URS : —These details will be examined.

ಶ್ರೀ ಎಂ. ಎಸ್. ಕೃಷ್ಣನ್ :—ಈಗಾಗಲೇ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ದ್ದೇವೆ. ಈ ಮಿನಿಮಂ ನೀಡ್ಸ್ ಪ್ರೋಗಾಮಿಗೆ ೧, ೨, ೩, ೪ನೇ ಪಂಚವಾರ್ಷಿಕ ಯೋಜನೆಗಳಲ್ಲಿ ನಮ್ಮ ರಾಜ್ಯದಲ್ಲಿ ಎಷ್ಟು ಮೀಸಲಾಗಿಟ್ಟಿದ್ದೀರಿ ? ಎಷ್ಟು ಖರ್ಚಾಗಿದೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್ :—ಅದನ್ನು ಬೇರೆ ಬೇರೆ ಹೆಡ್‌ನಲ್ಲಿ ಕೇಳಬೇಕಾಗುತ್ತದೆ. ಡ್ರಿಂಕಿಂಗ್ ವಾಟರ್ ಫೆಸಿಲಿಟೀಸ್ ಎಷ್ಟು ಎನ್ನುವುದನ್ನು ಬ್ರೇಕಪ್ ಕೊಟ್ಟು ಹೇಳ ಬೇಕಾಗುತ್ತದೆ. ಅದು ನನ್ನ ಹತ್ತಿರ ಇಲ್ಲ. ಒಟ್ಟು ಹೇಳುವುದಾದರೆ, ೪ ಪ್ಲಾನ್‌ನಿಂದ ನಾವು ಖರ್ಚುಮಾಡಿರುವ ಹಣ ಸುಮಾರು ೮೫೦ ಕೋಟಿ ರೂಪಾಯಿ. ೫ನೇಯ ಪ್ಲಾನ್ ಒಂದಕ್ಕೆ ಹತ್ತಿರ ಹತ್ತಿರ ೧,೦೦೦ ಕೋಟಿ ರೂಪಾಯಿ ಹಾಕಿದೆ. ಮಿನಿಮಂ ನೀಡ್ಸ್ ಪ್ರೊಗ್ರಾಮಿಗೆ ೧೦೨ ಕೋಟಿ ರೂಪಾಯಿ.

ಶ್ರೀ ಎಂ. ಎಸ್. ಕೃಷ್ಣನ್ :—ಟೋಟಲ್ ಮಿನಿಮಂ ನೀಡ್ಸ್ ಪ್ರೊಗ್ರಾಂ ಗೆ ಫಸ್ಟ್, ಸೆಕೆಂಡ್, ಥರ್ಡ್, ಫೋರ್ತ್ ಪ್ಲಾನ್‌ಗಳಿಗೆ ಪ್ರೊವೈಡ್ ಮಾಡಿರುವುದನ್ನು ಕೊಡುವು ದಕ್ಕಾಗುತ್ತದೆ ?

Sri D. DEVARAJ URS:—That is what I say. I am unable to give the break-up now. Specifically in the Fith Plan out of Rs. 1,000 crores, we have set apart Rs. 102 crores exclusively for this. But I am not able to give comparative picture just now. If you want I shall furnish separately.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ :—ಹರಿಜನ ಬಸದಿಗಳಿಗೆ ಗ್ರಾಮಾಂತರ ವಿದ್ಯುಚ್ಛಕ್ತಿ ಸರಬರಾಜು ಮಾಡುವ ನೀತಿಗೆ ಕೇಂದ್ರಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಆರ್ಥಿಕ ಸಹಾಯ ಎಷ್ಟು ಬಂದಿದೆ ? ರಾಜ್ಯಸರ್ಕಾರದವರು ಕೆಲವೆಡೆ ಹರಿಜನ ಬಸದಿಗಳಿಗೆ ಈ ಸ್ಕೀಂ ಮಂಜೂರು ಮಾಡಿದ್ದರೂ, ಕಾರ್ಯಗತವಾಗಿಲ್ಲ. ಆ ಪಟ್ಟಿಯನ್ನು ತರಿಸಿ ಆದಷ್ಟು ಜಾಗ್ರತೆ ಅಳವಡಿಸುವಂತೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ಮೊದಲೇ ಹೇಳಿದೆ. ಲೋಪವೇನಾದರೂ ಇದ್ದರೆ, ಅದನ್ನು ಸರಿಪಡಿಸುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ :— ಎಲ್ಲಾ ಹಳ್ಳಿಗಳಿಗೆ ಸರ್ವಋತು ರಸ್ತೆಗಳ ಯೋಜನೆ ಇದೆ, ಆ ಯೋಜನೆಗಳನ್ನು ಮಾಸ್ಟರ್ ಪ್ಲಾನಿನಲ್ಲಿ ಎರಡು ವರ್ಷಗಳಿಂದಲೂ ತೆಗೆದುಕೊಳ್ಳುತ್ತಾ ಇದ್ದೀರಿ. ಹಳ್ಳಿಗಳಿಗೆ ರಸ್ತೆ ಕೊಡತಕ್ಕ ಯೋಜನೆಯನ್ನು ಕಾರ್ಯಗತ ಖಂಡಿತ ಯಾವಾಗ ಮಾಡುತ್ತೀರಿ ? ಈ ವರ್ಷದ ಬಜೆಟ್ ನೋಡಿದರೆ ೧ ಕೋಟಿ ೩೦ ಲಕ್ಷ ರೂಪಾಯಿ ಇಟ್ಟಿದ್ದೀರಿ. ಹಳ್ಳಿಗಳ ಕಥೆ ಏನು ? ರಸ್ತೆ ಕೊಡುತ್ತೀರೋ ಇಲ್ಲವೋ ?

ಶ್ರೀ ಡಿ. ದೇವರಾಜ ಅರಸ್ :—ಲಿಂಗಪ್ಪನವರು ಮಲೆನಾಡು ಪ್ರಾಂತ್ಯದಿಂದ ಬಂದವರು. ಅವರ ಮನಸ್ಸಿಗೆ ಬೇಜಾರು ಆಗುತ್ತದೆ. ರಸ್ತೆಗಳ ಕೆಲಸ ಆಗಿಲ್ಲ, ಮಾಡೋಣ. ರಸ್ತೆ ಮಾಡುವುದಕ್ಕೆ ಕೆಲವು ಹಳ್ಳಿಗಳಲ್ಲಿ ಹೇಳಿದೆ. ನಮಗೆ ಇನ್ನೊಂದು ಕಷ್ಟ ಏನೆಂದರೆ ಹೋದ ವರ್ಷ ಮಾಡಿದ ರಸ್ತೆ ಮಟ್ಟ ಮಾಡದೇ ಬಿಟ್ಟರೆ, ಅಲ್ಲಿ ಕ್ಷಾಮ ಬಂದಾಗ ಮತ್ತೆ ಅದನ್ನೇ ಮಾಡು ಎನ್ನುವ ಪರಿಸ್ಥಿತಿ ಬರಬಾರದು ಎಂದು ಲಿಂಗಪ್ಪನವರಿಗೆ ಹೇಳುತ್ತೇನೆ. ಆ ಭಾಗದಲ್ಲಿ ರಸ್ತೆಗಳು ಇಲ್ಲ ಎಂದು ಅವರಿಗೆ ಬೇಜಾರು ಇದೆ. ಎರಡು ವರ್ಷಗಳಲ್ಲಿ ಅವಕ್ಕೆ ಹೆಚ್ಚು ಅಟೆನ್‌ಷನ್ ಕೊಡುವ ಪ್ರಯತ್ನ ಮಾಡುತ್ತೇನೆ. ಎಲೆಕ್ಷನ್ ಬರುವ ಹೊತ್ತಿಗೆ ನಿಮಗೆ ಅನುಕೂಲವಾಗುವ ಹಾಗೆ ಮಾಡುತ್ತೇನೆ.

Sri PRABHAKAR TELKAR :—In the reply to supplementary (b) it is stated that Rs. 102.60 would be sent on the minimum needs programure. May I know whether this includes all the villages of the State or only some of the villages.

ಶ್ರೀ ಡಿ. ದೇವರಾಜ್ ಅರಸ್ :—ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಎಷ್ಟರೇಜಗಿರತ ಕಡಿಮೆ ಇರತಕ್ಕ ಹಳ್ಳಿಗಳನ್ನು ತೆಗೆದುಕೊಳ್ಳೋಣ. It is not confined to any one district. It refers to whole State.

SUPPLY OF ADULTERATED ARRACK OR TODDY

419. Sri PRABHAKAR TELKAR (Kalagi).—Will the Chief Minister be pleased to state :—

(*a*) whether it has come to the notice of the Government that the arrack or toddy supplied to the consumers is mostly adulterated;

(*b*) whether it is a fact that the yield of arrack or toddy from the existing trees is quite less then the arrack or toddy required for consumption;